**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 1082/2014**

| | | |
|---|---|---|
| ಹೆಸರು | ಶ್ರೀ ಕುಮಾರ | ಚಾಸಾಃ 11 |
| ತಂದೆ ಹೆಸರು | ಶ್ರೀ ಸಿದ್ದಯ್ಯ | ಫ್ರಾಸಾಃ 4 |
| ವಯಸ್ಸು | 35 ವರ್ಷ | ಸಾಕ್ಷಿಯನ್ನು ದಿನಾಂಕಃ 10.06.2024 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಚಾಲಕ | |
| ವಾಸ | ಹಣೂರು ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>**

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ನಿಪಿ-2ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ2ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**<u>ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ</u>**

ದಿನಾಂಕಃ18.12.2010ರಂದು ಗುಂಡ್ಲುಪೇಟೆ ಟ್ನ್ ಪುರಸಭಾ ಕಚೇರಿಯ ದಕ್ಷಿಣ ದಿಕ್ಕಿನಲ್ಲಿರುವ ಅಂಗಡಿ ಮಳಿಗೆಗಳ ಕಟ್ಟಡದ ಮಹಡಿಯಲ್ಲಿರುವ ವಕೀಲರು ಮತ್ತು ನೋಟರಿ ಬಿ.ಶಿವಣ್ಣ ರವರ ಕಚೇರಿಯಲ್ಲಿ ಪಂಚರ ಸಮಕ್ಷಮ ನನ್ನ ಮತ್ತು ಇತರೆ

ಸಾಕ್ಷಿದಾರರ ಸಮಕ್ಷಮ ಪೊಲೀಸರು 9.30 ರಿಂದ 10.15 ವರೆಗೆ ಮಹಜರ್ ಜರುಗಿಸಿದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಇರುವುದಿಲ್ಲ:

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಎ.ಎನ್.ಕಾಂತಮ್ಮ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**